from the date of starting of such institutions. Since Zilla parishads have come into existence, this Goverment order has been neglected and no body is following. That measures the Government will take in this aspect?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):– ಪ್ರಾಥಮಿಕ ಶಾಲೆಗಳ ಅನುದಾನ ಸಂಹಿತೆಯ ನಿಯಮ 22ರ ಪ್ರಕಾರ ಯಾವುದೇ ಶಿಕ್ಷಣ ಸಂಸ್ಥೆಗೆ, ಶಾಲೆಯು ಪ್ರಾರಂಭಿಸಿದ 7ವರ್ಷಕ್ಕೆ ಮೊದಲು ಅನುದಾನಕ್ಕೆ ಒಳಪಡಿಸುವಂತಿಲ್ಲ. ಆದರೆ, ಸರ್ಕಾರ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಶಾಲೆಗಳ ಪ್ರಾರಂಭಿಕ ವರ್ಷದಿಂದಲೇ ಅನುದಾನಕ್ಕೆ ಒಳಪಡಿಸಬಹುದು. ಇಂತಹ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳವರಿಂದ ನಡೆಸಲ್ಪಡುತ್ತಿರುವ ಶಾಲೆಗಳೂ ಬರುತ್ತದೆ. ಸದರಿ ನಿಯಮಗಳ ಪ್ರಕಾರ ನಿರ್ದಿಷ್ಟ ಷರತ್ತುಗಳನ್ನು ಪೂರೈಸಿದಂತಹ ಸಂದರ್ಭಗಳಲ್ಲಿ ಅಂತಹ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಶಾಲೆಗಳಿಗೆ ಸರ್ಕಾರವು ಪ್ರಾರಂಭಿಕ ವರ್ಷದಿಂದ ಅನುದಾನಕ್ಕೆ ಒಳಪಡಿಸಬಹುದಿರುತ್ತದೆ. ಈ ಅಧಿಕಾರವು ಸರ್ಕಾರದಲ್ಲೇ ಕೇಂದ್ರೀಕೃತವಾಗಿದ್ದರೂ, ಜಿಲ್ಲಾ ಪರಿಷತ್ತುಗಳು ಅಧಿಕಾರಕ್ಕೆ ಬಂದ ನಂತರ ಇಂತಹ ಪ್ರಕರಣಗಳು ಸರ್ಕಾರಕ್ಕೆ ಬರುತ್ತಿರುವುದು ವಿರಳವಾಗಿರುತ್ತದೆ. ಸರ್ಕಾರವು, ಜಿಲ್ಲಾ ಪರಿಷತ್ತೇ ಈ ಅಧಿಕಾರವನ್ನು ಚಲಾಯಿಸುತ್ತಿರಬಹುದೆಂಬ ಭಾವನೆಯಿಂದ ಕಾನೂನಿನ ಪರಿಸ್ಥಿತಿಯನ್ನು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಸುತ್ತೋಲೆ ಮೂಲಕ ತಿಳಿಸಿರುತ್ತೆ. ಯಾವುದೇ ಜಿಲ್ಲಾ ಪರಿಷತ್ತು ಇಂತಹ ಪ್ರಕರಣಗಳನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಸರ್ಕಾರವು ಕಾನೂನಿನನ್ವಯ ಸೂಕ್ತ ಪರಿಶೀಲನೆ ಮಾಡಿ ಸಂಸ್ಥೆಯ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಸೂಕ್ತ ಆದೇಶ ಹೊರಡಿಸಲು ಕ್ರಮಕೈಗೊಳ್ಳುವುದು. ಮಾನ್ಯ ಸದಸ್ಯರು ಹೇಳಿರುವಂತಹ ಯಾವುದೇ ಸಮಸ್ಯೆಯೂ ಸರ್ಕಾರದ ಗಮನಕ್ಕೆ ಈವರೆಗೆ ಬಂದಿರುವುದಿಲ್ಲ. ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

(2) ಶಿರಾ ತಾಲ್ಲೂಕಿನಲ್ಲಿ ರೇಷ್ಮೆ ಸಹಾಯಕರಿಂದ ಹುಳುಗಳನ್ನು ಪಡೆದು ಸಾಕಿ ಹಾನಿಗೊಳಗಾದ ರೈತರಿಗೆ ಪರಿಹಾರ

ಶ್ರೀ ಡಿ. ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರಾಯಪುರದ ಸರಕಾರಿ ಗ್ರೇನೇಜ್‌ನಿಂದ ಕಳುಹಿಸಿದಂಥ ಸುಮಾರು 2014 ಮಿಶ್ರತಳಿ ರೇಷ್ಮೆ ಮೊಟ್ಟೆಗಳನ್ನು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ. ಆದರೆ ಮೊಟ್ಟೆಗಳ ಗೂಡು ಕಟ್ಟಿದ್ದು ಸಾಯುತ್ತಾ ಇದ್ದಾವೆ. ಅಲ್ಲಿರತಕ್ಕಂಥ ರೇಷ್ಮೆ ಇಲಾಖಾ ನೌಕರರನ್ನು ಕೇಳಿದರೆ ಎರಡು ಜಾತಿಯ ಹುಳುಗಳು ಮಿಶ್ರವಾಗಿ ಹುಟ್ಟಿದ್ದಾವೆ, ಆದುದರಿಂದ ಅವುಗಳು ಸಾಯುತ್ತಾ ಇವೆ ಎಂದು ಕಾರಣಗಳನ್ನು ಕೊಡುತ್ತಾರೆ. ಸರಕಾರಿ ಮಟ್ಟದಿಂದಲೇ, ಸರಕಾರಕ್ಕೆ ಸಂಬಂಧಪಟ್ಟಂಥ ಇಲಾಖೆಯಿಂದಲೇ ಒದಗಿಸಿದ ಈ ಮೊಟ್ಟೆಗಳು ಶಿರಾ ತಾಲ್ಲೂಕಿನಲ್ಲಿ 7–8 ಜನರಿಗೆ ಒದಗಿಸಿರುವುದರಿಂದ ಅವರಿಗೆ ಏನು ಹಾನಿ ಮತ್ತು ತೊಂದರೆಗಳು ಆಗಿವೆ ಅದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಸರಕಾರ ಒದಗಿಸಿರತಕ್ಕಂಥ ಮೊಟ್ಟೆಗಳಿಂದ ಆಗಿರತಕ್ಕಂಥ ಅನ್ಯಾಯದಿಂದ ರೈತರಿಗೆ ಏನು ತೊಂದರೆ ಉಂಟಾಯಿತು ಅವರಿಗೆ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನವನ್ನು ಸರಕಾರ ಮಾಡುತ್ತದೆಯೇ?

ಶ್ರೀ ವಿ. ಮುನಿಯಪ್ಪ:– "ಶಿರಾ ರೇಷ್ಮೆ ಸಹಾಯಕರಿಂದ ಪಡೆದ ರೇಷ್ಮೆ ಹುಳುಗಳನ್ನು ಸಾಕಿದ ಹುಳುಗಳು ಸಾಯುತ್ತಿರುವ ಬಗ್ಗೆ ಹಾನಿಗೊಳಗಾದ ರೈತರಿಗೆ ತಕ್ಕ ಪರಿಹಾರ ನೀಡುವ ಬಗ್ಗೆ ಮಾನ್ಯ ರೇಷ್ಮೆ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಧಾರವಾಡ ಜಿಲ್ಲೆ ರಾಯಪುರದಲ್ಲಿರುವ ಸರ್ಕಾರ ಗ್ರೈನೇಜಿನಿಂದ 2014 ಮಿಶ್ರತಳಿ ಮೊಟ್ಟೆಗಳನ್ನು ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಮಂಡಳಿಯ ವ್ಯಾಪ್ತಿಯಲ್ಲಿ ಬರುವ 10 ರೇಷ್ಮೆ ಬೆಳೆಗಾರರಿಗೆ ಒದಗಿಸಲಾಯಿತು ಮೊಟ್ಟೆಗಳನ್ನು ಯಾರು ಯಾರಿಗೆ ಕೊಡಲಾಯಿತು ಎಷ್ಟು ಗೂಡು ಉತ್ಪನ್ನವಾಯಿತು, ಎಲ್ಲಿ ಮಾರಾಟವಾಗಿದೆ ಮತ್ತು ಬೆಳೆ ಎಕೆ ಕೆಟ್ಟಿದೆ ಎಂಬ ಪಟ್ಟಿಯನ್ನು ಕೆಳಗೆ ನಮೂದಿಸಿದೆ.

ಬೆಳೆಗಾರರ ಹೆಸರು	ಮೊಟ್ಟೆ ಸಂಖ್ಯೆ	ಗೂಡಿನ ಉತ್ಪನ್ನ ಕೆಜಿ. ಗಳಲ್ಲಿ	ಮಾರಾಟ ಮಾಡಿದ ಹಾಗೂ ಇತರ ವಿವರ
1	2	3	4
ಶ್ರೀಯುತರಾದ			
1. ಆರ್. ಇ. ನಾಗಣ್ಣ	300	47.80	ರಾಮನಗರ ಮಾರುಕಟ್ಟೆಯಲ್ಲಿ ಮಾರಾಟವಾಗಿದೆ. ಬಿಡ್ ಚೀಟಿ ಬಿ. 7: 359407 ದಿನಾಂಕ 21–11–90
2. ಆರ್.ವಿ.ನಾಗಣ್ಣ	100	32.90	ರಾಮನಗರ ಮಾರುಕಟ್ಟೆ ಬಿಡ್ ಚೀಟಿ ಬಿ. 7: 328919 ದಿನಾಂಕ 21–11–90
3. ದಿವಾಕರ	225	32.00	ಬಿಡ್ ಚೀಟಿ ಬಿ.1 329801:329870
4. ಪುಟ್ಟಯ್ಯ	150	32.65	ರಾಮನಗರ ಮಾರುಕಟ್ಟೆ ಬಿಡ್ ಚೀಟಿ ಬಿ. 7: 244940
5. ಕೃಷ್ಣಶೆಟ್ಟಿ	80	25.00	ರಾಮನಗರ ಮಾರುಕಟ್ಟೆ ಬಿಡ್ ಚೀಟಿ ಬಿ. 7: 243753 ಮತ್ತು ಬಿ. 7: 487283
6. ಈಶ್ವರ ನಾಯಕ	120	56.67	ಬಿಡ್ ಚೀಟಿ ಬಿ. 7: 244450
7. ಉಗ್ರಪ್ಪ	300	–	ಬೆಳೆ, ಪಕ್ಕದ ಮನೆಯವರು ಮಟಾಸಿಡ್ ಎಂಬ ಕ್ರಿಮಿನಾಶಕ ಸಿಂಪರಣೆ ಮಾಡಿದುದರಿಂದ ಕೆಟ್ಟಿದೆ
8. ನಾರಾಯಣಪ್ಪ	249	–	ಬೆಳೆ ಹಿಪ್ಪುನೇರಳೆ ತೋಟದ ಪಕ್ಕದ ಟೊಮೋಟೊ ತೋಟಕ್ಕೆ ಕ್ರಿಮಿನಾಶಕ ಔಷಧ ಸಿಂಪರಣೆಯಿಂದ ಕೆಟ್ಟಿದೆ
9. ರಂಗಪ್ಪ	100	47.89	ಬಿಡ್ ಚೀಟಿ ಬಿ. 7: 293351
10. ನಾಗರಾಜು	299	138.300	ಬಿ.7:279849 ದಿ.18.11.90 ಬಿ.7:482107 ದಿ.17.11.90

ಹತ್ತು ಜನ ರೇಷ್ಮೆ ಬೆಳೆಗಾರರಲ್ಲಿ ಇಬ್ಬರು ಮಾತ್ರ ಕೆಳಕಂಡ ಕಾರಣಗಳಿಂದ ಬೆಳೆ ಕಳೆದು ಕೊಂಡಿದ್ದಾರೆ.

1) ಪಕ್ಕದ ಮನೆಯಲ್ಲಿ ಮೆಟಾಸಿಡ್ ಕ್ರಿಮಿನಾಶಕ ಔಷಧಿ ಸಿಂಪರಣೆ

2) ಪಕ್ಕದ ಟೊಮೋಟೋ ತೋಟಕ್ಕೆ ಕ್ರಿಮಿನಾಶಕ ಔಷಧಿ ಸಿಂಪರಣೆ.

ಶ್ರೀಯುತರಾದ ಆರ್. ವಿ. ನಾಗಣ್ಣ ಮತ್ತು ದಿವಾಕರ ಇವರಿಗೆ ಇಳುವರಿ ಕಡಿಮೆ ಬಂದಿದೆ. ಅಂದರೆ 100 ಮೊಟ್ಟೆಗೆ ಸುಮಾರು 15 ಕೆ.ಜಿ.

ಉಳಿದ ಎಲ್ಲಾ ರೇಷ್ಮೆ ಬೆಳೆಗಾರರು ಒಳ್ಳೆ ಬೆಲೆ ಪಡೆದಿದ್ದಾರೆ. ರೈತರು ಕೊಟ್ಟ ಮೊಟ್ಟೆ ಕಾಗದಗಳನ್ನು ವೀಕ್ಷಿಸಿದಾಗ ಶೇಕಡ್ವಾರು ಸುಮಾರು 95 ರಷ್ಟು ಚಾಕಿ.ಆಗಿದೆ

ಇದರಿಂದ ಸ್ಪಷ್ಟವಾಗಿ ಕಾಣಬರುವುದೇನೆಂದರೆ ಇಲಾಖಾ ಅಧಿಕಾರಿ ರೈತರಿಗೆ ಒದಗಿಸಿದ ಮೊಟ್ಟೆಗಳ ಗುಣಮಟ್ಟದಿಂದ ಬೆಳೆ ಕೆಟ್ಟಿಲ್ಲ, ಹುಳುಸಾಕಣೆ ಕಾಲದಲ್ಲಿ ಬಹಳ ಎಚ್ಚರ ವಹಿಸಬೇಕಾಗುತ್ತದೆ. ಪರಿಹಾರ ಕೊಡಲು ಬರುವುದಿಲ್ಲ.

(3) ಆರ್.ಎಲ್.ಇ.ಜಿ.ಪಿ.ಯೋಜನೆಯಲ್ಲಿ ನೇಮಿಸಿ ಕೊಂಡಿದ್ದ ದಿನಗೂಲಿ ಇಂಜಿನಿಯರ್‌ಗಳನ್ನು ಖಾಯಂ ಗೊಳಿಸುವುದು.

ಶ್ರೀ ಡಿ.ಎ. ಚಿನ್ನಪ್ಪ :– ಮಾನ್ಯ ಅಧ್ಯಕ್ಷರೇ, ಎನ್.ಆರ್.ಇ.ಪಿ. ಹಾಗೂ ಆರ್.ಎಲ್. ಈ.ಜೆ.ಪಿ. ಯೋಜನೆಗಳು ಪ್ರಸ್ತುತ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಂಡಿರುವುದು ಸರಿಯಷ್ಟೆ.

ಎನ್ ಆರ್. ಈ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ದಿನಗೂಲಿ ಇಂಜಿನಿಯರ್‌ಗಳನ್ನು ದಿನಾಂಕ 20–5–89ರ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ.ಪಿ. ಪಿಬಿವಿ 89 ರಂತೆ ಜಿಲ್ಲಾ ಪರಿಷತ್‌ಗಳಲ್ಲಿ ಖಾಯಂಗೊಳಿಸಲಾಗಿದೆ. ಆದರೆ ಈವರೆಗೂ ಈ ಸೌಲಭ್ಯವನ್ನು ಆರ್.ಎಲ್.ಈ.ಜಿ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಇಂಜಿನಿಯರ್‌ಗಳಿಗೆ ಕಲ್ಪಿಸಿರುವುದಿಲ್ಲ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಎನ್.ಆರ್.ಈ.ಪಿ. ಯೋಜನೆಯ ಇಂಜಿಯರ್‌ಗಳ ಸೇವೆಯನ್ನು ಕ್ರಮಬದ್ಧಗೊಳಿಸಿದ ಆದೇಶವನ್ನು ಆರ್‌ಎಲ್.ಈ.ಜಿ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಇಂಜಿನಿಯರ್‌ಗಳಿಗೂ ವಿಸ್ತರಿಸಿ ಖಾಯಂಗೊಳಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಸರ್ಕಾರದ ಆದೇಶದ ಸಂ. ಆರ್‌ಡಿಪಿ ಎಡಿಪಿ 93:84 ದಿನಾಂಕ 1.12.1984ರಲ್ಲಿ ಆರ್.ಎಲ್.ಇ.ಜಿ.ಪಿ. ಯೋಜನೆಯ ಅಡಿಯಲ್ಲಿ ಕೆಲವು ಹುದ್ದೆಗಳನ್ನು ಹಿಂದಿನ ಡಿ.ಆರ್.ಡಿ.ಎಸ್. ಮತ್ತು ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಮೈನರ್ ಇರಿಗೇಷನ್ ಮತ್ತು ಮುಖ್ಯ ಇಂಜಿನಿಯರ್. ಸಂಪರ್ಕ ಮತ್ತು ಕಟ್ಟಡ ಇಲಾಖೆಗಳ ಅಧೀನಕ್ಕೆ ಸೃಷ್ಟಿಸಲಾಯಿತು. ಅದರಂತೆ ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆಯು ನೇಮಕ ಮಾಡಿದೆ. ತದನಂತರ ಆರ್.ಎಲ್. ಈ.ಜಿ.ಪಿ. ಮತ್ತು ಎನ್.ಆರ್.ಇ.ಪಿ. ಯೋಜನೆಗಳು 1989–90ನೇ ಸಾಲಿನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯೊಂದಿಗೆ ವಿಲೀನಗೊಂಡು ಅದರಡಿಯಲ್ಲಿ ಸಿಬ್ಬಂದಿ ವೆಚ್ಚವನ್ನು ಪ್ರಸಾದನೆ ಮಾಡಿರಲಿಲ್ಲ ಅದಕ್ಕಾಗಿ ಸರ್ಕಾರದ ಆದೇಶದ ದಿನಾಂಕ 26.7.1989ರಲ್ಲಿ ಕೆಲವು ಹುದ್ದೆಗಳನ್ನು ತೆಗೆದುಹಾಕಬೇಕಾಯಿತು. ಆದಾಗ್ಯೂ ಕೆಲವು ಸಹಾಯಕ ಇಂಜಿನಿಯರ್‌ಗಳು ಮತ್ತು ಕಿರಿಯ ಇಂಜಿನಿಯರ್‌ಗಳು ಜವಾಹರ್ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಮುಂದುವರೆಯುತ್ತಿದ್ದಾರೆ ಮತ್ತು ಅವರು ಜಿಲ್ಲಾ ಪರಿಷತ್ತುಗಳ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಆದೇಶದ ಸಂ. ಆರ್‌ಡಿಪಿ 83 ಪಿಬಿವಿ:89 ದಿನಾಂಕ 20–5–1989ರಲ್ಲಿ ಹಿಂದಿನ ಡಿ.ಆರ್.ಡಿ.ಎಸ್ ಮತ್ತು ತಾಲ್ಲೂಕು ಬೋರ್ಡುಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯನ್ನು ಖಾಯಂಗೊಳಿಸಲು ಕೆಲವು ಮಾರ್ಗದರ್ಶನಗಳ ಮತ್ತು ಸೂಚನೆಗಳನ್ನು ನೀಡಿತ್ತು. ಅದರಂತೆ ಜಿಲ್ಲಾ ಪರಿಷತ್ತುಗಳು ಈ ಸಿಬ್ಬಂದಿಯನ್ನು ಜಿಲ್ಲಾ